

**ಎಡದಿಂದ ಬಲಕ್ಕೆ**

1. ಅದನ್ನೇನು ಹೇಳುವುದು? ಅಲ್ಲಿ ಎಲ್ಲವೂ ಹದಗೆಟ್ಟಿದ್ದೇ? 3
3. ಭಾರೀ ಮೂರ್ಖ ಬಿಡಿ, ಅವನ ಮಗ 3
4. ಈಗಿನ ವರ್ತನೆಯಂತೆಯೇ ಮುಂದುವರಿಯಬೇಕೆಂದು ಒತ್ತಾಯ 3
6. ವಿನಯವಂತಿಕೆ ಇಲ್ಲದವನ ಪರಿಸ್ಥಿತಿಯಲ್ಲಿ ಭಾರೀ ಇಳಿಕೆ 4
7. ಹಣ್ಣು ಕಾಯಿ ಕಳಿಸಲು ಬೇಕೇ ಬೇಕು ಚಿಕ್ಕ ದೊಡ್ಡ ದುಡ್ಡು 4
9. ತೇರನ್ನೆಳೆವವರಿಗೆ ನೀಡುವ ಸಂಭಾವನೆಯಲ್ಲಿ ನಾನಾ ವಿಧ 4
11. ಎಲ್ಲರ ಅಭ್ಯುದಯವನ್ನೇ ಬಯಸುವವರಿಗೆ ಒಂದು ವಿಶೇಷ ಹೆಸರು 4
15. ಎಲ್ಲವನ್ನೂ ತಾಜಾ ಇರಿಸಲು ಇಂಥ ಭದ್ರ ಪೆಟ್ಟಿಗೆ ಬೇಕೇ? 3
16. ಎಲ್ಲರಿಗೂ ಇಷ್ಟವಾಗುವಂತಹದು ಈ ಸುಂದರ ಬಳ್ಳಿ 3
17. ಮಾಲೂರಿನಲ್ಲಿರುವಾಗ ಏಕಿಂಥ ಮೆತ್ತಗಿನ ಧ್ವನಿ, ಮಾತು? 3

**ಮೇಲಿನಿಂದ ಕೆಳಕ್ಕೆ**

1. ಅಸುರರಿಗೂ ಇರಲೇಬೇಕು ಬಿಡಿ ಒಬ್ಬ ರಾಜ 3
2. ನಾಣ್ಯವನ್ನೆಣಿಸಿ ತಂದದ್ದು ಈ ಪ್ರಸಿದ್ಧ ಸಿರಿ ಧಾನ್ಯ 3
3. ತುಂಬ ಕಲಿತವನಷ್ಟೇ ಏನಲ್ಲ ; ಉನ್ನತ ಮನೆತನದವನು ಕೂಡ 3
5. ತಾಳೆಯಾಗಲಿಲ್ಲ ಹಣ ; ಅದಕ್ಕೇ ಎರಗಿತು ಭಾರೀ ಭಯ 3
6. ಆತ್ಮಾವಲೋಕನದಿಂದ ಲಭಿಸುವ ಪ್ರಯೋಜನಗಳಿಗೆ ಮಿತಿಯೇ ಇಲ್ಲ 3
8. ಮನ್ನಿಸುವವರ ಮನಸಿನಲ್ಲಿ ಸದಾ ಸಂತಸವೇ 3
10. ಸೇವಂತಿಗೆಯ ವ್ಯಾಪಾರಿಗಳಿಗೆ ವಾಸಿಸಲೊಂದು ಮನೆ 3
12. ಬಾಕಿ ಉಳಿಸಿ ಉಳಿಸಿ ಕಡೆಗೆ ಭಿಕ್ಷುಕನೇ ಆದ 3
13. ಹಿರಿಯರೆಲ್ಲರ ಮಹಿಮೆ ಅರಿತಿರುವುದೇ ಆತನ ಹೆಚ್ಚುಗಾರಿಕೆ 3
14. ಕೂಲಿಕಾರನ ಮನೆಯಲ್ಲೂ ಅಂಥದೇ ದೋಸೆ ಹೆಂಚು 3

### 23—03—2023 ಉತ್ತರಗಳು

**ಎಡದಿಂದ ಬಲಕ್ಕೆ**

1. ನಿರ್ವಚನ 3. ಅದಿರು 4. ವಣಿಕ 6. ವಿನಿಮಯ 7. ತ್ರಿಪಿಟಕ 9. ಯಮಲೋಕ 12. ಸದುಪಾಯ 14. ನಧಾವಿ (=ವಿಧಾನ ಹಿಂದುಮುಂದು) 15. ಸಕಲ 16. ದಳಪತಿ

**ಮೇಲಿನಿಂದ ಕೆಳಕ್ಕೆ**

1. ನಿರುಪಾಯ 2. ನವರಾತ್ರಿ 3. ಅವನಿ 5. ಕಳ್ಳಾಟ 6. ವಿಷಮಯ 8. ಕಮನೀಯ 10. ಮರ್ದನ 11. ಕಲಾವಿದ 12. ಸರಸತಿ (=ಸರಸ್ವತಿ) 13. ಪಾತಾಲ (= ಪಾತಾಳ)

ಪ್ರಶ್ನಾಂಕಣ

# ಧ್ರುವ ಕರಡಿ ಜೈಲು ಎಲ್ಲಿದೆ? ಏಕೆ?

ಧ್ರುವ ಕರಡಿ ಜೈಲು (Polar Bear Jail) ಇಡೀ ಜಗತ್ತಿನಲ್ಲಿ ಒಂದೇ ಒಂದಿದೆ. ಅದು ಈ ದೈತ್ಯ ಬಲಿಷ್ಠ ಪ್ರಾಣಿಗಳ (ಚಿತ್ರ 2, 3) ನೈಸರ್ಗಿಕ ನೆಲೆಯಾದ ಆರ್ಕ್ಟಿಕ್ ಪ್ರದೇಶದಲ್ಲೇ (ಚಿತ್ರ1) ಅಸ್ತಿತ್ವದಲ್ಲಿದೆ! ಕೆನಡಾ ದೇಶದ ಪೂರ್ವದಲ್ಲಿನ, ಆರ್ಕ್ಟಿಕ್ ಮಹಾಸಾಗರದ ಒಂದು ಒಳಚಾಚು (Bay) ಆಗಿರುವ ಹಡ್ಸನ್ ಬೇಯ ಅಂಚಿಗೇ ಹೊಂದಿದಂತಿರುವ ಪುಟ್ಟ ಶಹರ ಚರ್ಚಿಲ್‌ನಲ್ಲಿ ಈ ಕರಡಿ ಸೆರೆಮನೆ ಸ್ಥಾಪನೆಗೊಂಡಿದೆ. ಮೂಲತಃ ಮಿಲಿಟರಿ ಉದ್ದೇಶದಿಂದ ನಿರ್ಮಾಣಗೊಂಡ 28 ಕೊಠಡಿಗಳ ಈ ಸುಭದ್ರ ಜೈಲು ಇಸವಿ 1950ರ ದಶಕದಿಂದ ಊರಿಗೆ ನುಗ್ಗಿ ಬರುವ ಪುಂಡ, ಕಳ್ಳ, ದಾಳಿಕೋರ ಕರಡಿಗಳನ್ನು ಸ್ವಲ್ಪ ಕಾಲ ಬಂಧಿಸಿಡಲು ಬಳಕೆಯಲ್ಲಿದೆ!

ಇಡೀ ಆರ್ಕ್ಟಿಕ್ ಪ್ರದೇಶದಲ್ಲಿ ಸದ್ಯದಲ್ಲಿ ಉಳಿದಿರುವ ಪೋಲಾರ್ ಬೇರ್‌ಗಳ ಒಟ್ಟು ಸಂಖ್ಯೆ 25ರಿಂದ 30 ಸಾವಿರ. ಆ ಪೈಕಿ ಸುಮಾರು 850 ಈ ಕರಡಿಗಳು ಚರ್ಚಿಲ್ ಸನಿಹದ ಹಡ್ಸನ್ ಬೇ ಪ್ರದೇಶದಲ್ಲಿ ನೆಲೆಸಿವೆ. ಪ್ರತಿ ವರ್ಷ ಅಲ್ಲಿನ ಚಳಿಯ ಕಾಲದಲ್ಲಿ ಅಕ್ಟೋಬರ್‌ನಿಂದ ಮುಂದಿನ ಜುಲೈವರೆಗಿನ ಅವಧಿಯಲ್ಲಿ ಅಲ್ಲಿನ ಸರಾಸರಿ ತಾಪಮಾನ ಶೂನ್ಯಕ್ಕಿಂತ 12 ಡಿಗ್ರಿ ಸೆಲ್ಸಿಯಸ್ ಕಡಿಮೆ ಮಟ್ಟವನ್ನು ತಲುಪುವುದರಿಂದ ಇಡೀ ಹಡ್ಸನ್ ಬೇ ಕಡಲ ಪ್ರದೇಶದ ಮೇಲ್ಮೈ ಆರೆಂಟು ಅಡಿಗಳಷ್ಟು ಆಳದವರೆಗೆ ಹೆಪ್ಪುಗಟ್ಟಿ ದೃಢ ನೆಲದಂತಾಗುತ್ತದೆ. ತೇಲುತ್ತ ಉಳಿವ ಈ ಸಮುದ್ರ ಹಿಮ (Sea Ice)ದ ಮೇಲೆ ಒಂದು ವಿಶಿಷ್ಟ ವಿಧದ ಶೈವಲ ಧಾರಾಳವಾಗಿ ಬೆಳೆಯುತ್ತದೆ. ಅದೇ ಹಿಮಹಾಸಿನ ತಳದ ಕಡಲ ನೀರಲ್ಲಿ ಪ್ರಸಿದ್ಧ ಸಾಗರ ಪ್ರಾಣಿ ಸೀಲ್‌ಗಳು (Seal) ಈಜಾಡುತ್ತ ಬೇಟೆಯಾಡುತ್ತ ಬದುಕುತ್ತವೆ. ಧ್ರುವ ಕರಡಿಗಳ ಆಹಾರ ಇದೇ ಶೈವಲಗಳು ಮತ್ತು ಸೀಲ್‌ಗಳು. ಶೈವಲವನ್ನು ಮೇಯ್ದು, ಮಂಜಿನ ನೆಲವನ್ನು ಬಗೆದು ಸೀಲ್‌ಗಳನ್ನು ಹೊರಕ್ಕೆಳೆದು ತಿಂದು ಈ ಕರಡಿಗಳು ದಷ್ಟಪುಷ್ಟವಾಗಿರುತ್ತವೆ.



ಆದರೆ ಸ್ಪಷ್ಟವಾಗಿಯೇ ಪ್ರತಿವರ್ಷ ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ಹಡ್ಸನ್ ಬೇಯಲ್ಲಿ ಹಿಮ ಹಾಸಿನ ನೆಲ ಇರುವುದಿಲ್ಲ. ಆ ಎರಡೂ ತಿಂಗಳುಗಳ ಕಾಲ ಹಿಮ ಕರಡಿಗಳು ಕಡಲಿನ ಹೊರಗೆ ನೆಲದ ಮೇಲೇ ವಾಸಿಸುತ್ತವೆ; ಆಹಾರವಿಲ್ಲದೇ ಶರೀರದಲ್ಲಿ ಶೇಖರವಾಗಿದ್ದ ಕೊಬ್ಬನ್ನೇ ಬಳಸಿ ಬದುಕುತ್ತವೆ. ಕೆಲವು ಕರಡಿಗಳು ಮಾತ್ರ ಆಕಸ್ಮಿಕವಾಗಿ ಚರ್ಚಿಲ್ ಊರಿನ ಜನರ ಮನೆಗಳ ಬಳಿಗೆ ಬರುತ್ತವೆ. ಕಿಟಕಿಯಲ್ಲಿ ಇಣುಕಿ, ಬಾಗಿಲನ್ನು ಬಡಿದು ಏನಾದರೂ ಆಹಾರವನ್ನು ಗಳಿಸಲು ಯತ್ನಿಸುತ್ತವೆ; ಮನುಷ್ಯರಿಗೆ ಅಪಾಯಕಾರಿಯಾಗುತ್ತವೆ. ಕೆಲವಂತೂ ಓಡಿಸಿದರೂ ಜಗ್ಗದೆ ಹಟ ಹಿಡಿದು ಅಲ್ಲೇ ಉಳಿಯುತ್ತವೆ. ಅಂತಹ ಕರಡಿಗಳಿಗೆ ಅರಿವಳಿಕೆ ಚುಚ್ಚಿ ಎತ್ತಿ ತಂದು ಜೈಲಿನಲ್ಲಿ ಇರಿಸಲಾಗುತ್ತದೆ. ಕೊಠಡಿಯಲ್ಲಿ ಒಂಟಿಯಾಗಿ ಉಳಿದು, ಅಲ್ಲಿ ಇದ್ದಷ್ಟೂ ಕಾಲ ಕೇವಲ ನೀರನ್ನು ಕುಡಿದು ಪಾಠ ಕಲಿಯುವ ಕರಡಿಗಳನ್ನು ಹಡ್ಸನ್ ಬೇ ಹೆಪ್ಪುಗಟ್ಟಿದೊಡನೆ ಹೊರಬಿಡಲಾಗುತ್ತದೆ. ಮತ್ತೆಂದೂ ಅವು ಮನುಷ್ಯರ ಸಹವಾಸಕ್ಕೆ ಬರದಿರುತ್ತವೆ!

■ ಎನ್. ವಾಸುದೇವ್